ನಮ್ಮ ಹುಡುಗರು ತಾವೂ ತಿಳಿದು ಹೊಸಹೊಸ ವಿಷಯ ನನಗೆ ಹೇಳಕೆ ಶುರು ಮಾಡಿದ್ರು. ಇದಾದ ಮೇಲೆ ನಮ್ಮ ಹಳ್ಳಿ ಸುತ್ತಮುತ್ತ ಯಾವುದೇ ಹಕ್ಕಿಗೆ ಹೊಡೆತ ಬಿದ್ರು, ಗಾಯ ಆದರೂ ನನ್ನ ದವಾಖಾನೆಗೆ ತರಂಗೆ ಆಗೋಯ್ತು. ನಮ್ಮೂರ ಜನರೊಳಗೆ ಇಷ್ಟು ಕಾಳಜಿ ಹುಟ್ಟಸೋಕೆ ಕನಿಷ್ಠ ಪಕ್ಷ ಇಪ್ಪತ್ತು ವರ್ಷ ಹೆಣಗಬೇಕಾತ್ರಿ. ಮತ್ತೊಂದು ಜೀವದ ಬದುಕು ಅರಿಯೋ ತಿಳಿವು ಜನರಲ್ಲಿ ಬರೋಕೆ ಭಾಳ ಸಮಯ ಹಿಡಿಯಿತ್ರಿ'

ಮತ್ತೊಂದು ನೆನಪಾದ ಪ್ರಸಂಗ ನಮ್ಮೂರಲ್ಲೇ ನಡೀತ್ರಿ. ನಮ್ಮೂರಿನ ಕೆರೆಯ ಬಾಜೂ ಕುರುಚಲು ಕಾಡು ಐತ್ರಿ. ಅಲ್ಲಿ ಕಪ್ಪು ಹೊಟ್ಟೆಯ ತೋರಣ ಹಕ್ಕಿ (ಬ್ಲಾಕ್ ಬೆಲ್ಲೀಡ್ ಟರ್ನ್) ಅಂತಾರಲ್ರಿ ಅದು ನೆಲದಲ್ಲಿ ಗೂಡು ಕಟ್ಟಿತ್ತು. ಜನ ಓಡಾಡುವ ಅಪಾಯ ಜಾಗದಲ್ಲಿ ಅದರ ಗೂಡಿತ್ತು. ಯಾವ ಕ್ಷಣದಲ್ಲಾದರೂ ನಾಯಿಗಳು ಮೊಟ್ಟೆ ಕದಿಯುವ ಇಲ್ಲವೇ ನಡೆದಾಡುವ ಜನ ಇದನ್ನು ತುಳಿದು ಹಾಳು ಮಾಡುವ ಸಾಧ್ಯತೆ ಇತ್ತು. ನನ್ನ ವಿದ್ಯಾರ್ಥಿಗಳು ಇದನ್ನು ಪತ್ತೆ ಹಚ್ಚಿ ನನಗೆ ಹೇಳಿದರು. ಜೊತೆಗೆ ಅಲ್ಲಿ ಕುರಿಗಾಯಿಗಳ ಕಾಟ. ನೀವು ನಂಬ್ತಿರೋ ಇಲ್ವೋ? ನಾನು ನನ್ನ ಶಿಷ್ಯರು ಒಟ್ಟು ಹತ್ತು ದಿನ ಆ ಕಾಡಿನಲ್ಲಿ ಕಾವಲು ಕಾದಿದ್ದೇವೆ. ಹಕ್ಕಿಗೆ ಯಾರೂ ತೊಂದರೆ ಕೊಡಬಾರದೂಂತ ಹನ್ನೆರಡು ಜನರ ಟೀಂ ಮಾಡಿ ಸರದಿ ಪ್ರಕಾರ ನಾಕಾಬಂದಿ ಮಾಡಿದ್ದೇವೆ. ಏಪ್ರಿಲ್ ಹತ್ತರಿಂದ ಮೇ ಇಪ್ಪತ್ತರ ತನಕ ಹಕ್ಕಿಯನ್ನೂ ಅದರ ಮರಿಗಳನ್ನೂ ಜೋಪಾನ ಮಾಡಿ ಅದು ಹಾರಿ ಹೋದ ಮೇಲೆ ಮನೆ ಸೇರಿದ್ದೇವೆ. ಆ ಮಟ್ಟಿಗೆ ಹುಚ್ಚರಂತೆ ಸಾಥ್ ಕೊಟ್ಟವರು ನನ್ನ ಶಿಷ್ಯರು.

ಕೊನೆಗೆ ನಾನೊಂದು ರೀಲ್ ಕ್ಯಾಮೆರಾ ಕೊಂಡೆ. ಆಗ ಬಾನಲೀಸ್ಸ್ ಹದ್ದು ಫೋಟೊ ತೆಗೆಯುವ ಖಯಾಲಿ ಹುಟ್ಟಿಕೊಂಡಿತು. ನಮ್ಮ ಹುಡುಗರು ಸಾರ್ ನಾಟಿಕೋಳಿ ತಂದು ಹಗ್ಗಕ್ಕೆ ಕಟ್ಟಿ ಮೈದಾನದಲ್ಲಿ ಇಟ್ಟರೆ ಬಾನಲೀಸ್ಸ್ ಹದ್ದು ಬಂದೇ ಬರುವುದೆಂದೂ, ಹತ್ತಿರದಲ್ಲೇ ಗುಂಡಿ ಮಾಡಿ ಅದರಲ್ಲಿ ಅಡಗಿ ಕೂತು ಹತ್ತಿರದಿಂದ ಅದರ ಪಟ ತೆಗೆಯುವುದು ಸಲೀಸೆಂದು ಪ್ಲಾನು ಕೊಟ್ಟರು. ನಮಗೂ ಈ ದುಸ್ಸಾಹಸ ಸರಿ ಎನಿಸಿತು.

ಆದರೆ ಊರಲ್ಲಿ ಇದಕ್ಕಾಗಿ ಒಂದು ಕೋಳಿ ಕೊಂಡು ತರುವುದು ಯಾರು ಎಂಬ ಸವಾಲು



ಆರ್.ಜಿ. ತಿಮ್ಮಾಪುರ

ಹುಟ್ಟಿತು. ನಮ್ಮ ಹುಡುಗರು ನಾವೇ ತರುತ್ತೇವೆ ಎಂದು ಹೊರಟರು. ಇದ ಕಂಡು ಊರಿನ ಜನರಿಗೆ ದಿಗಿಲು ಮತ್ತು ಆಶ್ಚರ್ಯ. ಯಾಕೆಂದರೆ ಕೋಳಿ ಖರೀದಿ ಮಾಡಲು ಹೊರಟವರು ಭಟ್ರು ಮತ್ತು ಐನೋರ ಮನೆ ಹುಡುಗ್ರು! ಸಸ್ಯಾಹಾರಿ ಸ್ವಾಮಿಗಳ ಮಕ್ಕಳಿಗೆ ಈ ಮಾಸ್ತರ ಊರಿನಲ್ಲಿ ಕೋಳಿ ಹುಡುಕಲು ಕಳಿಸಿ ನಮ್ಮ ಮಾನ ಮರ್ಯಾದೆ ಹರಾಜು ಹಾಕುತ್ತಿದ್ದಾನೆ ಎಂದು ಎಲ್ಲರೂ ಉರಿದು ಬಿದ್ದರು. ಊರಿನ ಜನರಿಗೆ ಅದು ತಾವು ತಿನ್ನಲು ತರಿಸುತ್ತಿರುವುದಲ್ಲ. ಬದಲಿಗೆ ಹದ್ದುವಿಗೆ ತಿನ್ನಿಸಲು– ಎಂಬ ಮಾತನ್ನು ಹೇಳಿ ಒಪ್ಪಿಸಲು ಪ್ರಯತ್ನ ಪಟ್ಟು ಸೋತೆವು. ನಮ್ಮ ದುಸ್ಸಾಹಸ ಯಾರಿಗೂ ಅರ್ಥವಾಗಲಿಲ್ಲ. ಅವರವರ ಅಪ್ಪಂದಿರು ಅವರವರ ಮಕ್ಕಳಿಗೆ ಈ ಹುಚ್ಚು ಮೇಷ್ಟ್ರು ಮಾತ್ ಕೇಳಿ ಹಾಳಾಗೋಗ್ತಿರಲ್ಲೋ ಮುಂಡೇವಾ! ಎಂದು ಅಂಡಿನ ಮೇಲೆ ಬಾರಿಸಿದರು. ನೀ ಯಾವ ಸೀಮೆ ಮೇಷ್ಟ್ರೋ ಎಂದು ಬೈದರು.

●